IJRAR.ORG E-ISSN: 2348-1269, P-ISSN: 2349-5138

INTERNATIONAL JOURNAL OF RESEARCH AND ANALYTICAL REVIEWS (IJRAR) | IJRAR.ORG

An International Open Access, Peer-reviewed, Refereed Journal

# ಶರಣ ದಾಸೋಹ ತತ್ತ್ವದ ಹಲವು ಆಯಾಮಗಳು - ಒಂದು ವಿಮರ್ಶೆ

**ಡಾ. ಬಿ. ನಿರ್ಮಲ. ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ**

## ಪೀಠಿಕೆ

ಶರಣರು ಅನ್ನದಾಸೋಹ ಮತ್ತು ಜ್ಞಾನದಾಸೋಹಕ್ಕೆ ಮಹತ್ವದ ಸ್ಥಾನ ನೀಡಿದ್ದಾರೆ. ಅಂಗವನ್ನು ಆಚಾರಕ್ಕರ್ಪಿಸಿದಾಗ ಆಚಾರಲಿಂಗ ಪ್ರಸಾದಿಯಾಗುತ್ತಾನೆ. ಪ್ರಾಣವನ್ನು ಲಿಂಗಕ್ಕರ್ಪಿಸಿ, ಆ ಲಿಂಗವನು ಪ್ರಾಣಕ್ಕರ್ಪಿಸಿದಾಗ ಪ್ರಾಣಲಿಂಗ ಪ್ರಸಾದಿಯಾಗುತ್ತಾನೆ. ಹೀಗೆ ಎಲ್ಲವನ್ನೂ ಸಮರ್ಪಣೆ ಮಾಡಿ ಕೊಳ್ಳುವುದೇ ದಾಸೋಹದ ಪರಮಗುರಿ. ದಾನದ ವಿಷಯದಲ್ಲಿ ಎಲ್ಲವನ್ನು ಸಮರ್ಪಿಸಿಕೊಳ್ಳುವುದಿಲ್ಲ. ಹೆಚ್ಚಾದುದನ್ನು ನೀಡಲಾಗುತ್ತದೆ. ಅನೇಕ ಸಲ ಪುಣ್ಯ ಬರುತ್ತದೆಂಬ ಕಾರಣಕ್ಕೆ ದಾನ ಮಾಡಲಾಗುತ್ತದೆ. ಆದರೆ ದಾಸೋಹದಲ್ಲಿ ಇಂತಹ ನಿರೀಕ್ಷೆಗಳಿಲ್ಲ. ಏನೋ ಸಿಗುತ್ತದೆಂಬ ಕಾರಣಕ್ಕೆ ಯಾವುದೋ ಆಗುತ್ತದೆಂಬ ಕಾರಣಕ್ಕೆ ದಾಸೋಹ ಮಾಡುವುದಿಲ್ಲ. ಹೀಗಾಗಿ ದಾನ ಮತ್ತು ದಾಸೋಹದ ಪರಿಕಲ್ಪನೆಗಳು ಬೇರೆ ಬೇರೆ. ಅಹಂಕಾರವನ್ನು ಕಳೆದುಕೊಳ್ಳುವಲ್ಲಿ ದಾಸೋಹದ ಪಾತ್ರ ದೊಡ್ಡದು.

ಚೆನ್ನಬಸವಣ್ಣನವರು ಇನ್ನೊಂದು ವಚನದಲ್ಲಿ- “ದೇಹಭಾವದಹಂಕಾರ ದಾಸೋಹ ಭಾವದೊಳಗಲ್ಲದೆ ಅಳಿಯದು” ಎಂದಿದ್ದಾರೆ. ಮರುಳಶಂಕರದೇವರು ಮಹಾದಾಸೋಹಿಯಾಗಿದ್ದರೆಂಬುದನ್ನು ಇದೇ ವಚನದಲ್ಲಿ ಹೇಳಿದ್ದಾರೆ. ಅಂತಹ ದಾಸೋಹಿಯನ್ನು ನಿಮ್ಮಿಂದ ಕಾಣುವಂತಾಯಿತೆಂದು ಬಸವಣ್ಣನವರಿಗೆ ಹೇಳುತ್ತಾ, ದಾಸೋಹದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.

ಹೊನ್ನು ಹೆಣ್ಣು ಮಣ್ಣು ನಿಮ್ಮ ಸೊಮ್ಮು
ತನುವೆನಗಿಲ್ಲ ತನುವಿನಲ್ಲಿ ನೀವೆಡೆಗೊಂಡಿಪ್ಪಿರಾಗಿ
ಮನವೆನಗಿಲ್ಲ ನೆನಹಿನ ಕೊನೆಯಲ್ಲಿ ಬೆಳಗುತಿರ್ಪಿರಾಗಿ
ನೀವೇ ಪ್ರಾಣವಾಗಿಪ್ಪಿರಾಗಿ
ಆನೆಂಬ ಭಾವಕ್ಕೆ ತೆರಹಿಲ್ಲದೆ ನಿರಹಂಕಾರದಿಂ
ಮಾಡುವ ನೀಡುವ ಸಂದಳಿ
ದಾಸೋಹದ ನಿರಹಂಕೃತಿ ನಿಷ್ಪತ್ತಿಯಾಗಿ
ಸ್ವಾನುಭಾವದ ನಿಜಸುಖದಿಂದೆರಡರಿಯದಿರ್ಪರಯ್ಯಾ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು.
– ಆದಯ್ಯ (ಸ.ವ.ಸಂ:6, ವ: 1162)

ದೇಹ-ನಿರ್ದೇಹವಾಗುವುದನ್ನು ಹಿಂದಿನ ವಚನದಲ್ಲಿ ಚೆನ್ನಬಸವಣ್ಣನವರು ಹೇಳಿದ್ದರೆ, ಇಲ್ಲಿಯ ಚಿಂತನೆ ಭಿನ್ನವಾಗಿದೆ. ದೇಹ ತನ್ನದೆಂದು ತಿಳಿದುಕೊಂಡಾಗ ನಿರ್ದೇಹವಾಗಬೇಕಾದ ಅನಿವಾರ್ಯತೆಯಿದೆ. ಯಾವಾಗ ತನುವೇ ತನ್ನದಲ್ಲವೆಂದು ತಿಳಿದಾಗ ಅಲ್ಲಿ ನಿರ್ದೇಹವಾಗುವ ಸಂದರ್ಭವೇ ಬರುವುದಿಲ್ಲ. ತನು ನನ್ನದಲ್ಲ, ಪ್ರಾಣ ನನ್ನದಲ್ಲ, ಮನವೆಂಬುದೆನಗಿಲ್ಲ ಎಂಬಂತಹ ಭಕ್ತಿಭಾವ ಬೆಳೆದು, ಭಕ್ತನು ಶರಣನ ಹಂತ ತಲುಪಿದ ಮೇಲೆ ಅಲ್ಲಿ ದೇಹವು ಸಹಜವಾಗಿಯೇ ನಿರ್ದೇಹವಾಗಿಬಿಡುತ್ತದೆ. ಆಗ ಸಹಜವಾಗಿಯೇ ದಾಸೋಹದಲ್ಲಿ ನಿರಹಂಕೃತಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಆದಯ್ಯನವರು “ಸ್ವಾನುಭಾವದ

ನಿಜಸುಖದಿಂದೆರಡರಿಯದಿರ್ಪರಯ್ಯಾ" ಎಂದು ಹೇಳಿದ್ದಾರೆ. ಪ್ರಾರಂಭದ ಹಂತದಲ್ಲಿದ್ದ ತಾನು, ತನ್ನದೆಂಬ ಭಾವವಳಿದು ಹೋದಾಗ ಭಕ್ತ ನಿರ್ದೇಹಿಯಾಗುತ್ತಾನೆ. ನಿಜವಾದ ದಾಸೋಹಿಯಾಗುತ್ತಾನೆ.

**ದಾಸೋಹದ ಮಹತ್ವ**

ಶರಣರ ಕಾಯಕತತ್ವಕ್ಕೆ ಪ್ರಾಮುಖ್ಯತೆ ಬಂದಂತೆ, ಅವರ ದಾಸೋಹ ತತ್ವಕ್ಕೂ ಮಹತ್ವಬಂತು. ಶರಣರ ದಾಸೋಹದ ಸುದ್ದಿ ಕಲ್ಯಾಣದ ಸುತ್ತಮುತ್ತ ಪಸರಿಸಿತು. ಅವರು ನಡೆಸುತ್ತಿದ್ದ ಅನ್ನ ದಾಸೋಹದಿಂದ ಅನೇಕ ಅಸಹಾಯಕರು, ಅಂಗವಿಕಲರು ಸ್ವಾಭಿಮಾನದಿಂದ ಬದುಕುವಂತಾಯಿತು. ಅನ್ನದಾಸೋಹದಿಂದ ಸಹಪಂಕ್ತಿ-ಸಹಭೋಜನ ಪ್ರಾರಂಭವಾಗಿ, ಎಲ್ಲರೂ ಒಂದೇಕಡೆ ಸಮಾನವಾಗಿ ಕುಳಿತು ಪ್ರಸಾದ ಸೇವಿಸುವಂತಾಯಿತು. ಕಾಯಕ ತತ್ವವು ಜಾತಿಯ ಅಹಂಭಾವ ಮತ್ತು ವೃತ್ತಿಯ ಕೀಳರಿಮೆಗಳನ್ನು ಏಕಕಾಲಕ್ಕೆ ನಿವಾರಣೆ ಮಾಡಿದರೆ, ದಾಸೋಹ ತತ್ವವು ಸಹಪಂಕ್ತಿ-ಸಹಭೋಜನದಿಂದ ಸಮಾನತೆಯನ್ನು ತಂದುಕೊಟ್ಟಿತು. ದಾಸೋಹದ ವಿವಿಧ ಆಯಾಮಗಳನ್ನು ಕುರಿತು ಅನೇಕ ವಚನಕಾರರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ವೈಷ್ಣವಬ್ರಾಹ್ಮಣನಾಗಿದ್ದ ಗುಪ್ತಮಂಚಣ್ಣ ಹರಿಭಕ್ತರಾಗಿದ್ದರು. ಮಂಚಣ್ಣನವರ ತಂದೆ ದಾಮೋದರ ಹಾಗೂ ತಾಯಿ ಮಾಯವಾದಿ. ಈ ದಂಪತಿಗೆ ಬಹಳ ವರ್ಷಗಳಾದರೂ ಮಕ್ಕಳಾಗಲಿಲ್ಲ. ಬಸವಣ್ಣನವರ ಪ್ರಭಾವಕ್ಕೊಳಗಾದ ಈ ದಂಪತಿಗಳು ಗುಪ್ತವಾಗಿ ಶಿವನನ್ನು ಆರಾಧಿಸುತ್ತ, ಶಿವಶರಣರ ತತ್ವಾದರ್ಶಗಳಿಗೆ ಮಾರುಹೋದರು. ಶಿವನ ಆರಾಧನೆಯನ್ನು ಇವರು ಗುಪ್ತರೀತಿಯಿಂದ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಮಂಚಣ್ಣನವರ ಜನನವಾದುದರಿಂದ ಗುಪ್ತಮಂಚಣ್ಣನೆಂದು ಹೆಸರಿಟ್ಟರು. ಈ ಮಂಚಣ್ಣ ಮುಂದೆ ದೊಡ್ಡವರಾದ ಮೇಲೆ ವೈಷ್ಣವಮತ ತೊರೆದು ಶಿವಮತಕ್ಕೆ ಬರುತ್ತಾರೆ. ಶಿವಶರಣನಾಗಿ ಬಾಳುತ್ತಾರೆ. ಮಂಚಣ್ಣ ದಾಸೋಹತತ್ವವನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ತಾನು ಹರಿಭಕ್ತನಾಗಿ ಬಂದುದನ್ನು ವಚನದಲ್ಲಿ ಹೇಳಿಕೊಂಡಿರುವ ಗುಪ್ತಮಂಚಣ್ಣ ದಾಸೋಹದ ಮಹತ್ವವನ್ನು ಕುರಿತು ವಿವರಿಸಿದ್ದಾರೆ. ಹಲವು ವೇಷಗಳಿಂದ, ಹಲವು ನಾಮ ಹಾಕಿಕೊಂಡು ಹುಸಿಬದುಕು ಬದುಕುತ್ತಿದ್ದ ತನಗೆ ಶರಣರ ದಾಸೋಹತತ್ವ ಹೊಸ ಬದುಕನ್ನು ಕೊಟ್ಟಿತೆಂದು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ. ದಾಸೋಹವೆಂಬುದನ್ನರಿಯದೆ ತನ್ನ ವೇಷ ಹುಸಿಯಾಗಿತ್ತು, ಅರಿತ ಮೇಲೆ ದಾಸೋಹವೇ ತನಗೆ ಹೊಸ ದಾರಿಯನ್ನು ತೋರಿಸಿತೆಂದು ಹೇಳಿದ್ದಾರೆ:

ತೊಳಸಿಯ ಗಿಡವ ಮೆಲಲಾರದೆ ಕಿವಿಯೊಳಗಿಕ್ಕಿದೆ
ಕಲಸಿದ ನಾಮಕ್ಕೆ ಹಣೆಯ ಕಾಣದೆ ಎದೆಯೊಳಗಿಕ್ಕಿದೆ
ತಾವರೆಯಮಣಿಯ ತಾವಡಿಸೊದಕ್ಕೆ
ಠಾವಕಾಣದೆ ಡಾವರಿಸುತ್ತಿದೆ,
ಎನ್ನ ನಿಮ್ಮ ದಾಸೋಹದ ದಾಸನ ಮಾಡಿಸಯ್ಯಾ
ನಾರಾಯಣಪ್ರಿಯ ರಾಮನಾಥಾ.
-ಗುಪ್ತ ಮಂಚಣ್ಣ (ಸ.ವ.ಸಂ.7, ವ:341)

ಇಷ್ಟಲಿಂಗ ಗುರುವಿನ ಹಂಗು,
ಚಿತ್ತ ಕಾಮನ ಹಂಗು
ಪೂಜೆ – ಪುಣ್ಯ ಮಹಾದೇವನ ಹಂಗು,
ಎನ್ನ ದಾಸೋಹ ಆರ ಹಂಗೂ ಅಲ್ಲ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವೆ
ಕಣ್ಣಿಯ ಮಾಡಬಲ್ಲಡೆ ಬಾ, ಎನ್ನ ತಂದೆ.
– ನುಲಿಯ ಚಂದಯ್ಯಾ (ಸ.ವ.ಸಂ.7, ವ: 1297)

ಕಾಯಕನಿಷ್ಠೆಯ ನುಲಿಯ ಚಂದಯ್ಯ, ಒಂದೊಂದಕ್ಕೆ ಒಂದೊಂದರ ಹಂಗು ಇದೆ. ಆದರೆ ದಾಸೋಹ ಯಾರ ಹಂಗೂ ಅಲ್ಲವೆಂದು ತಿಳಿಸಿದ್ದಾರೆ. ತನ್ನ ಚಂದೇಶ್ವರಲಿಂಗವಾದರೂ ಕಣ್ಣಿಯ ಕಾಯಕ ಮಾಡಿಯೇ ಬದುಕಬೇಕು. ಆದುದರಿಂದ ಚಂದಯ್ಯನವರು, ಚಂದೇಶ್ವರಲಿಂಗಕ್ಕೆ ತಂದೆಯೆಂದು ಗೌರವಕೊಡುತ್ತಲೇ ಕಾಯಕದ ಕಡ್ಡಾಯದ ವಿಷಯವನ್ನು ತಿಳಿಸುತ್ತಾರೆ. ಕಾಯಕದ ಬಗೆಗೆ ಇಷ್ಟೊಂದು ನಿಷ್ಠೆ ತೋರಿದ ಈ ಶರಣ ದಾಸೋಹದ ಬಗೆಗೂ ಹೊಸ ವಿಚಾರವನ್ನೇ ತಿಳಿಸಿದ್ದಾರೆ.

ಸೋಹಂ ಹೊಕ್ಕು ದಾಸೋಹವೆಂಬ ಅಂಜನವ ಹಚ್ಚಿ
ಮುಂದೆ ನೋಡಲಾಗಿ ಅರುಹ ಕಂಡೆ,
ಆ ಅರುಹಿಂದ ಆಚಾರವ ಕಂಡೆ, ಆಚಾರದಿಂದ ಗುರುವಕಂಡೆ,
ಗುರುವಿಂದ ಲಿಂಗವ ಕಂಡೆ, ಲಿಂಗದಿಂದ ಜಂಗಮವ ಕಂಡೆ,
ಜಂಗಮದಿಂದ ಪ್ರಸಾದವ ಕಂಡೆ, ಪ್ರಸಾದದಿಂದ ಪರವ ಕಂಡೆ…
-ಹಡಪದ ಅಪ್ಪಣ್ಣ (ಸ.ವ.ಸಂ.9,ವ:1043)

ದಾಸೋಹವೆಂಬುದು ಹಡಪದ ಅಪ್ಪಣ್ಣನವರಿಗೆ ಅಂಜನವಾಗಿ ಕಾಣಿಸಿಕೊಂಡಿದೆ. ಅಂಜನ ಹಚ್ಚಿಕೊಂಡು ನೋಡಿದರೆ, ನೆಲದಲ್ಲಿರುವ ನಿಧಿ ಕಾಣಿಸುತ್ತದೆಂಬುದು ಅಂದಿನವರ ನಂಬಿಕೆಯಾಗಿತ್ತು. ಅಂಜನವೆಂದರೆ, ಇಲ್ಲಿ ಒಂದು ರೀತಿಯ ಬೆಳಕು. ಬೆಳಕಿದ್ದಾಗ ಮಾತ್ರ ಎದುರಿಗಿದ್ದದ್ದು ಕಾಣಿಸುತ್ತದೆ. ದಾಸೋಹವೆಂಬುದು ಅಪ್ಪಣ್ಣನಂತಹ ವಚನಕಾರರಿಗೆ ಬದುಕನ್ನೇ ಬೆಳಗುವ ಬೆಳಕಾಗಿ ಕಾಣಿಸಿಕೊಂಡಿದೆ. ಈ ಬೆಳಕಿನಿಂದಲೇ ಎಲ್ಲವೂ ಕಾಣತೊಡಗುತ್ತವೆ. ಈ ವಚನದಲ್ಲಿ ಒಂದಕ್ಕೊಂದು ಸಂಬಂಧವಿದೆ. ಮೊದಲು ಅರುಹು ಕಾಣಿಸುತ್ತದೆ. ಅರುಹಿನಿಂದ-ಆಚಾರ, ಆಚಾರದಿಂದ-ಗುರು, ಗುರುವಿನಿಂದ-ಲಿಂಗ, ಲಿಂಗದಿಂದ-ಜಂಗಮ, ಜಂಗಮದಿಂದ-ಪ್ರಸಾದ, ಪ್ರಸಾದದಿಂದ-ಪರದೈವ. ಹೀಗೆ ಈ ಕೊಂಡಿ ಬೆಳೆಯುತ್ತ ಹೋಗುತ್ತದೆ. ಇದೆಲ್ಲಾ ಸಾಧ್ಯವಾದದ್ದು ದಾಸೋಹದಿಂದ ಎಂಬ ಸತ್ಯ ಸ್ಪಷ್ಟವಾಗುತ್ತ ಹೋಗುತ್ತದೆ.

ಮಾದಾರ ಧೂಳಯ್ಯನವರು ವಚನವೊಂದರಲ್ಲಿ ತನ್ನ ಇಷ್ಟದೈವ ಧೂಳೇಶ್ವರ ಕಾಣಿಸುವುದು ದಾಸೋಹ ಮಾಡುವ ಸದ್ಭಕ್ತರಲ್ಲೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಸತ್ಯಶುದ್ಧ ಕಾಯಕ ಮತ್ತು ನಿಚ್ಚಜಂಗಮ ದಾಸೋಹ ಇವೆರಡೂ ಶರಣರ ಹೃದಯದೊಳಗೆ ಅಚ್ಚೊತ್ತಿದ್ದವು ಎಂಬುದನ್ನು ಧೂಳಯ್ಯ ವಚನದಲ್ಲಿ ವಿವರಿಸಿದ್ದಾರೆ.

ಭಕ್ತಿದಾಸೋಹವ ಮಾಡುವವನೇ ನಿಜವಾದ ಲಿಂಗಾನುಭಾವಿಯೆಂದು ಹೇಳಿರುವ ಮಾಚಿದೇವರು, ನಿತ್ಯವೂ ಭಕ್ತಿದಾಸೋಹ ಮಾಡುವಾತ ಬಸವಣ್ಣನೆಂದು ತಿಳಿಸಿದ್ದಾರೆ. ಸಂಗಮೇಶ್ವರದ ಅಪ್ಪಣ್ಣನೆಂಬ ವಚನಕಾರ ನೀಲಲೋಚನೆಯೇ ನಿಜವಾದ ದಾಸೋಹಿಯೆನ್ನುತ್ತಾರೆ. ಒಬ್ಬೊಬ್ಬ ಶರಣನ ವಿಶಿಷ್ಟತೆಯನ್ನು ಗುರುತಿಸುತ್ತಾ ಹೋದ ಇವರು ತನ್ನ ವಚನದ (ವಚನ:337) ಕೊನೆಯಲ್ಲಿ "ಪರಮ ದಾಸೋಹವ ಮಾಡಿ, ಲಿಂಗದಲ್ಲಿ ನಿರವಯಲನೈದಿದರು ನೀಲಲೋಚನೆಯಮ್ಮನವರು" ಎಂದಿದ್ದಾರೆ. ಪ್ರಭುದೇವರು-ಮಾಯಾಕೋಲಾಹಲನಾದರೆ, ಸಿದ್ಧರಾಮ ಮಹಾಶಿವಯೋಗಿ, ಬಸವಣ್ಣ-ಭಂಡಾರಿಯಾದರೆ, ಚೆನ್ನಬಸವಣ್ಣ-ಷಟ್ಸ್ಥಲ ಚಕ್ರವರ್ತಿ, ಅಜಗಣ್ಣ-ಐಕ್ಯಸ್ಥಲವ ಸೂರೆಗೊಂಡರೆ, ಉರಿಲಿಂಗದೇವರು-ಶರಣಸತಿಲಿಂಗಪತಿಯಾದರು. ಬಿಬ್ಬಿಬಾಚಯ್ಯ-ಪ್ರಸಾದಿಸ್ಥಲವ ಸೂರೆಗೊಂಡರೆ, ಚಂದಿಮರಸ ಜ್ಞಾನವ ಸೂರೆಗೊಂಡರು. ಅಕ್ಕನಾಗಮ್ಮ ಪ್ರಸಾದಕ್ಕೆ ಸತಿಯಾದರೆ, ಮೋಳಿಗೆ ಮಹಾದೇವಿ ಬಟ್ಟಬಯಲಾದರು. ಹೀಗೆ ಒಬ್ಬೊಬ್ಬ ಶರಣನದೂ ಒಂದೊಂದು ವಿಶಿಷ್ಟತೆಯೆಂದು ಹೇಳಿದ ಸಂಗಮೇಶ್ವರ ಅಪ್ಪಣ್ಣನವರು, ನೀಲಲೋಚನೆಯಿಂದಲೆ ದಾಸೋಹ ಬೆಳೆದು, ಬಸವಕಲ್ಯಾಣದಲ್ಲಿ ಮಹಾದಾಸೋಹದ ಬೆಳಕು ಕಾಣಿಸಿಕೊಂಡಿತೆಂದು ಹೇಳಿದ್ದಾರೆ.

ಹೀಗೆ ಅನೇಕ ವಚನಕಾರರು ದಾಸೋಹದ ಮಹತ್ವವನ್ನು, ಅದರ ಅನಿವಾರ್ಯತೆಯನ್ನು ಹೇಳುತ್ತಲೇ ಮಹಾದಾಸೋಹಿಗಳ ಪರಿಚಯ ಮಾಡಿಕೊಟ್ಟಿದ್ದಾರೆ. ದಾಸೋಹವೆಂದರೆ, ಕೇವಲ ಉಣ್ಣುವುದಲ್ಲ, ಉಣ್ಣಿಸುವುದಲ್ಲ; ಸತ್ಯ-ಶುದ್ಧ ಬದುಕನ್ನು ಬಾಳುವದಾಗಿತ್ತು. ಅದು ನಿತ್ಯ-ನಿರಂತರವಾಗಿತ್ತು. ದಾಸೋಹದ ಪರಿಕಲ್ಪನೆಯನ್ನು ಶರಣರು ತಮ್ಮ ಅನುಭವದ ಹಿನ್ನಲೆಯಲ್ಲಿ, ತಮ್ಮ ವೃತ್ತಿ ಪ್ರತಿಮೆಗಳ ಮೂಲಕ ವೈವಿಧ್ಯಮಯ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಇತರ ವಿಚಾರಗಳು

ತನು-ಮನ-ಧನಗಳನ್ನರ್ಪಿಸಿ, ಮಾಡುವ ದಾಸೋಹ ಒಂದು ಮೌಲ್ಯವಾಗಿ ಬೆಳೆದಿದೆ. ತನುವನರ್ಪಿಸಿ ಮಾಡುವ ದಾಸೋಹವು ಸಂಪೂರ್ಣವಾಗಿರುತ್ತದೆ, ಅದೇ ನಿಜವಾದ ಮುಕ್ತಿಯೆಂದು ಉರಿಲಿಂಗಪೆದ್ದಿ ಹೇಳಿದ್ದಾರೆ. ಮನವನರ್ಪಿಸಿ ಮಾಡುವ ದಾಸೋಹವು ಮತ್ತು ಧನವನರ್ಪಿಸಿ ಮಾಡುವ ದಾಸೋಹವು ಸಂಪೂರ್ಣವಾಗಿರುತ್ತದೆ, ಅದೇ ನಿಜವಾದ ಭಕ್ತಿಯಾಗಿರುತ್ತದೆ, ಅದೇ ಮುಕ್ತಿಗೆ ದಾರಿಯಾಗುತ್ತದೆಂದು ಶರಣರು ಹೇಳಿದ್ದಾರೆ. ಅಂಗದ ಮೇಲೆ ಲಿಂಗವಿದ್ದಾಗ ಸಾಲೋಕ್ಯಮುಕ್ತಿಯ ಅಗತ್ಯವಿಲ್ಲ, ಗುರುಲಿಂಗಜಂಗಮದ ದಾಸೋಹದಲ್ಲಿದ್ದಾಗ ಸಾಮೀಪ್ಯ ಮುಕ್ತಿಯ ಅಗತ್ಯವಿಲ್ಲವೆಂದು ಉರಿಲಿಂಗಪೆದ್ದಿ ತಿಳಿಸಿದ್ದಾರೆ. ಶರಣರು ಕಾಯಕವನ್ನೇ ಕೈಲಾಸವೆಂದು, ದಾಸೋಹವನ್ನೇ ಮುಕ್ತಿಯೆಂದು ತಿಳಿದರು. ಹೀಗಾಗಿ ಕಾಯಕವೇ ಕೈಲಾಸವಾಯಿತು. ದಾಸೋಹವೇ ಮುಕ್ತಿಯಾಯಿತು.

ಆಯುಷ್ಯವೇ-ಲಿಂಗ, ಶ್ರೀಯೇ-ಜಂಗಮ, ನಿಧಾನವೇ-ಸುಜ್ಞಾನ, ವಿದ್ಯೆಯೇ -ಶಿವಮಂತ್ರ ಮತ್ತು ದೇಹವೇ-ದಾಸೋಹವೆಂದು ಅಜಗಣ್ಣತಂದೆ ಹೇಳಿದ್ದಾರೆ. ಎಲ್ಲಾ ತನ್ನೊಳಗೇ ಇದೆ, ಸಾಧನೆಯಿಂದ ಅದು ಪ್ರಕಟವಾಗುತ್ತದೆ. ಒಮ್ಮನದಿಂದ, ಭಕ್ತಿಯಿಂದ ಮಾಡುವುದು ಮಾತ್ರ ದಾಸೋಹವಾಗುತ್ತದೆ. ತನು-ಮನ ಕರಗದೆ, ಕಾಯವ ಬಳಲಿಸದೆ, ಕಾಯಕವ ಮಾಡದೆ ಕಾಡಿಬೇಡಿ ಮಾಡುವುದು ದಾಸೋಹ ಹೇಗಾಗುತ್ತದೆಂದು ಶಿವಲೆಂಕ ಮಂಚಣ್ಣನವರು ಕೇಳಿದ್ದಾರೆ.

ದಾಸೋಹವೆಂಬುದು ಸರಳವಾದದ್ದಲ್ಲ. ಧನ ನೀಡುವುದು ದಾಸೋಹವಲ್ಲ, ಸಂಪತ್ತು ಹಂಚುವುದು ದಾಸೋಹವಲ್ಲ. ದಾಸೋಹವೆಂಬುದು ಅಂತರಂಗದ ಭಕ್ತಿ ಸಾಧ್ಯತೆ, ಅದು ತನು-ಮನ-ಧನದ ಸಮರ್ಪಣೆ. ತನ್ನನ್ನೇ ತಾನು ಸಮುದಾಯಕ್ಕೆ ಸಮಾಜಕ್ಕೆ ಅರ್ಪಿಸಿಕೊಳ್ಳುವುದೇ ನಿಜವಾದ ದಾಸೋಹ. ತನು-ಮನ-ಧನವನು, ಗುರು-ಲಿಂಗ-ಜಂಗಮರಿಗೆ ಅರ್ಪಿಸಿ ಮಾಡುವ ತ್ರಿವಿಧ ದಾಸೋಹದ ಬಗೆಗೆ ಶರಣರು ಹೇಳಿದ್ದಾರೆ. ಇದರೊಂದಿಗೆ ಅನ್ನದಾಸೋಹ ಮತ್ತು ಜ್ಞಾನದಾಸೋಹದಂತಹ ಮಹತ್ವದ ದಾಸೋಹಗಳಿವೆ. ಅನ್ನದಾಸೋಹಕ್ಕೆ ಶರಣರ ವಚನಗಳಲ್ಲಿ ಹೆಚ್ಚಿನ ವಿವರಗಳು ದೊರೆಯದಿದ್ದರೂ ಚೆನ್ನಬಸವಣ್ಣನವರ

ಒಂದು ವಚನದಲ್ಲಿ ಇದರ ಪ್ರಸ್ತಾಪವಿದೆ. ಸಮ ಸಮಾಜ ಕಟ್ಟಬೇಕೆಂದು ಕನಸು ಕಂಡ ಶರಣರು ದೊಡ್ಡ ಚಳವಳಿಯನ್ನೆ ಪ್ರಾರಂಭಿಸಿದರು.

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು,
ಕೊಂಬಲ್ಲಿ, ಕೊಡುವಲ್ಲಿ ಕುಲವನರಸುವರು.
ಏನೆಂಬೆನಯ್ಯಾ ಒಬ್ಬೊಚ್ಚಿ ಭಕ್ತರ? ಏನೆಂಬೆನಯ್ಯ ಒಬ್ಬೊಚ್ಚಿ ಭವಿಗಳ?
ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ
ಭಕ್ತಕಾಯ ಮಮಕಾಯವೆಂತೆಂಬರು?"
– ಚೆನ್ನಬಸವಣ್ಣ (ಸ.ವ.ಸಂ.3, ವ:167)

ಈ ವಚನದಲ್ಲಿ ಅಂದಿನ ವಾಸ್ತವಸ್ಥಿತಿ ಸ್ಪಷ್ಟವಾಗಿ ಕಾಣಿಸಿದೆ. ಶರಣರು ಅನ್ನದಾಸೋಹ ಪ್ರಾರಂಭಿಸಿದಾಗ, ಎಲ್ಲ ಜಾತಿಯ ಜನಾಂಗದವರು ಒಂದುಕಡೆ ಸೇರಿ, ಸಹಪಂಕ್ತಿಯಲ್ಲಿ ಕುಳಿತು ಸಹಭೋಜನ ಮಾಡಿದರು. ಮದುವೆ ಸಂದರ್ಭಗಳಲ್ಲಿ ಬೇರೆ ಜಾತಿಯವರ ಮದುವೆಗೆ ಹೋದಾಗ ಅವರು ನೀಡಿದ ಉಡುಗೊರೆ ಬಟ್ಟೆಬರೆಗಳನ್ನು ಸ್ವೀಕರಿಸಿದರು. ವಧು-ವರರಿಗೆ ತಾವು ಬಟ್ಟೆಬರೆಗಳನ್ನು ನೀಡಿದರು. ಇದು ಅವರಿಗೆ ಕಷ್ಟವೆನಿಸಲಿಲ್ಲ. ಆದರೆ ಬೇರೆ ಬೇರೆ ಜಾತಿಗಳೊಂದಿಗೆ ರಕ್ತಸಂಬಂಧ ಮಾಡಲು, ಹೆಣ್ಣ-ಗಂಡು ಕೊಡಲು ಸಿದ್ಧರಿರಲಿಲ್ಲ. ಇದನ್ನು ಗಮನಿಸಿದ ಚೆನ್ನಬಸವಣ್ಣನವರು ಅಂದಿನ ವಾಸ್ತವ ಚಿತ್ರಣವನ್ನು ತಮ್ಮ ವಚನದಲ್ಲಿ ವಿವರಿಸಿದ್ದಾರೆ.

ಉಂಬಲ್ಲಿ-ಉಡುವಲ್ಲಿ ಯಾವುದೇ ಜಾತಿಯಾದರೂ ನಡೆಯುತ್ತದೆ. ಆದರೆ ಕೊಂಬಲ್ಲಿ-ಕೊಡುವಲ್ಲಿ ಮಾತ್ರ ತಮ್ಮ ಕುಲದವರೇ ಆಗಬೇಕು. ಶತಮಾನಗಳಿಂದ ವರ್ಣವ್ಯವಸ್ಥೆಯಲ್ಲಿ ಬೆಳೆದುಕೊಂಡು ಬಂದಿದ್ದ ಸಾಮಾನ್ಯಜನರಿಗೆ ಶರಣರ ಜಾತಿನಿರಸನ ಸಿದ್ಧಾಂತವು ಅಷ್ಟಾಗಿ ಆಕರ್ಷಿಸಲಿಲ್ಲ. ಇವರ ಮನಸ್ಥಿತಿ ಕಂಡು ಚೆನ್ನಬಸವಣ್ಣನಂತಹವರಿಗೆ ಸಿಟ್ಟುಬರುತ್ತದೆ. ಅಂತೆಯೇ ಅವರು "ಏನೆಂಬೆನಯ್ಯ ಒಬ್ಬೊಚ್ಚಿಭಕ್ತರ?" ಎಂದು ಪ್ರಶ್ನಿಸಿದ್ದಾರೆ. ಒಂದನ್ನು ಒಪ್ಪಿ ಒಂದನ್ನು ಬಿಡುವ ಇಂತಹ ಭಕ್ತರನ್ನು ಒಬ್ಬೊಚ್ಚಿ ಭಕ್ತರೆಂದು ವಿಡಂಬಿಸಿದ್ದಾರೆ. ಈ ವಚನದಿಂದ ಅನ್ನದಾಸೋಹ ನಡೆಯುತ್ತಿತ್ತು. ಸಹಪಂಕ್ತಿ-ಸಹ ಭೋಜನಗಳು ದಾಸೋಹದಿಂದ ಸಾಧ್ಯವಾದವೆಂಬ ಸತ್ಯ ತಿಳಿದುಬರುತ್ತದೆ. ಆದರೆ "ಕೊಂಬಲ್ಲಿ ಕೊಡುವಲ್ಲಿ" ಅಷ್ಟು ಸರಳವಾಗಿರಲಿಲ್ಲ. ಅಂದಿನ ಅರಸೊತ್ತಿಗೆಗೆ ಕಾಯಕ-ದಾಸೋಹದಂತಹ ಸಿದ್ಧಾಂತಗಳು ಪೂರಕವಾಗಿ ಕಂಡವು. ಕಾಯಕದಲ್ಲಿ ಎಲ್ಲರೂ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಕಾರ್ಯಮಾಡುತ್ತಿದ್ದರು. ಹೀಗಾಗಿ ರಾಜ್ಯದ ಬೊಕ್ಕಸ ತುಂಬತೊಡಗಿತು. ಹೊರಗಿನಿಂದ ವ್ಯಾಪಾರಿಗಳು ಹೆಚ್ಚುಸಂಖ್ಯೆಯಲ್ಲಿ ಬರತೊಡಗಿದರು. ಇದರಿಂದ ತೆರಿಗೆಸಂಗ್ರಹ ಹೆಚ್ಚಾಯಿತು. ಯಾವಾಗ ಶರಣರು 'ಕೊಂಬುವ-ಕೊಡುವ' ಅಂತರ್ಜಾತಿ ವಿವಾಹಕ್ಕೆ ಕೈಹಾಕಿದರೋ ಆಗ ಆಳುವ ವ್ಯವಸ್ಥೆಗೆ ಅದನ್ನು ಸಹಿಸಿ ಕೊಳ್ಳಲಾಗಲಿಲ್ಲ. ಅವರಿಗೆ ಮರಣದಂಡನೆ ವಿಧಿಸಿದರು. ಆನೆಗಳಿಂದ ತುಳಿಸಿ ಉಗ್ರವಾದ ಮರಣಶಿಕ್ಷೆ ಕೊಟ್ಟರು. ಆಗ ಅನೇಕ ಶರಣರನ್ನು ಅಟ್ಟಿಸಿಕೊಂಡು ಹೋದಾಗ ಅವರು ಚೆಲ್ಲಾಪಿಲ್ಲಿಯಾಗಿ ಬಿಟ್ಟರು.

ಚೆನ್ನಬಸವಣ್ಣನವರ ಈ ವಚನ, ಮಹತ್ವದ ಸಂದೇಶದ ದಾಖಲೆಯಾಗಿದೆ. ಆಳುವ ವ್ಯವಸ್ಥೆ ಹೇಗೆ ಅಂತರ್ಜಾತಿ ವಿವಾಹಕ್ಕೆ ತೀವ್ರ ವಿರೋಧವನ್ನೊಡ್ಡಿತೋ, ಅದೇರೀತಿ ಜನಸಾಮಾನ್ಯರೂ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಲಿಲ್ಲವೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಕಾಯಕ- ದಾಸೋಹದಂತಹ ಮೌಲ್ಯಗಳು ಎಲ್ಲರಿಗೂ ಇಷ್ಟವಾದವು, ಆಳುವ ವ್ಯವಸ್ಥೆಯೂ ಅಡ್ಡಿಬರಲಿಲ್ಲ. ಆದರೆ ಅಂತರ್ಜಾತಿ ಮದುವೆಯ ವಿಷಯ ಬಂದಾಗ ಯಾರೂ ಒಪ್ಪಿಕೊಳ್ಳಲಿಲ್ಲ. ಇದು ಶರಣರ ಕೊನೆಯ ಅಸ್ತ್ರವಾಗಿತ್ತು. ಆದರೆ ಆಳುವವ್ಯವಸ್ಥೆ ಅದಕ್ಕೆ ಅವಕಾಶ ನೀಡಲಿಲ್ಲವೆಂಬ ಸತ್ಯವು ಚರಿತ್ರೆಯಿಂದ ತಿಳಿದು ಬರುತ್ತದೆ.

ಅನ್ನದಾಸೋಹಕ್ಕೆ ಶರಣರು ಕಟ್ಟಿಸಿದ ದಾಸೋಹ ಮಂಟಪಗಳು ಕಾರಣವಾದರೆ; ಜ್ಞಾನದಾಸೋಹಕ್ಕೆ ಅನುಭವಮಂಟಪ ಕಾರಣವಾಯಿತು. ಅನುಭವಮಂಟಪವು ಜ್ಞಾನದಾಸೋಹದ ಕೇಂದ್ರವಾಗಿತ್ತು. ಇಂತಹ ಅನುಭವಮಂಟಪದಲ್ಲಿದ್ದ ಅತ್ಯಂತ ಸಾಮಾನ್ಯ ವ್ಯಕ್ತಿಕೂಡ ಜ್ಞಾನಿಯಾಗಿ ಬೆಳೆದುನಿಂತ, ಅನುಭಾವಿಯಾಗಿ ಕಾಣಿಸಿಕೊಂಡ. ಇದು ಶರಣರ ಜ್ಞಾನದಾಸೋಹದ ಬಹುದೊಡ್ಡ ಕೊಡುಗೆ.

ಶರಣರು ಒಂದೆಡೆ ಸೇರಿಕೊಂಡು ಅನುಭವವನ್ನು ಹಂಚಿಕೊಳ್ಳುತ್ತಿದ್ದರು. ಇಂತಹವುಗಳನ್ನೇ ಧರ್ಮ ಗೋಷ್ಠಿ, ಅನುಭಾವಗೋಷ್ಠಿ, ಗೀತಗೋಷ್ಠಿ, ಶಿವತತ್ವಗೋಷ್ಠಿಯೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇಂತಹ ಗೋಷ್ಠಿಗಳು ನಡೆಯುತ್ತಿದ್ದ ಸ್ಥಳವನ್ನೇ ಅನುಭವಮಂಟಪವೆಂದು ಕರೆಯಲಾಗಿದೆ. ನೀಲಮ್ಮನವರ ಒಂದು ವಚನದಲ್ಲಿ, ಅನುಭವಮಂಟಪದ ಹುಟ್ಟಿಗೆ ಬಸವಣ್ಣನೇ ಕಾರಣಕರ್ತನಾದನೆಂಬ ಸತ್ಯ ತಿಳಿದುಬರುತ್ತದೆ. ಹಡಪದಪ್ಪಣ್ಣನವರ ಕಾಲಜ್ಞಾನ ವಚನದಲ್ಲಿ ಕಲ್ಯಾಣದಲ್ಲಿದ್ದ ಚರಮಂಟಪ, ಆರಾಧ್ಯಮಂಟಪಗಳ ಪ್ರಸ್ತಾಪವಿದೆ. ಅವುಗಳಲ್ಲಿ ಅನುಭವಮಂಟಪವೂ ಒಂದಾಗಿದೆ.

ಆದಿಯಾಧಾರವಿಲ್ಲದಂದು ಕಳೆಮೊಳೆದೋರದಂದು
ಕಾಮನಿಃಕಾಮವಿಲ್ಲದಂದು, ವೀರವಿತರಣವಿಲ್ಲದಂದು…
ಏನೂ ಏನೂ ಇಲ್ಲದಂದು, ಎಲ್ಲಾ ಮೂರ್ತಿಗಳು ನೆಲೆಗೊಳ್ಳದಂದು…
ಒಂದು ಗುಣವನೊಂದು ಅಕ್ಷರಕ್ಕೆ ತಂದಾತ ನಮ್ಮ ಬಸವಯ್ಯನು.
…

ಚೆನ್ನಬಸವನೆಂಬ ಪ್ರಸಾದಿಯ ಪಡೆದು
ಅನುಭವಮಂಟಪವನನು ಮಾಡಿ,
ಅನುಭವಮೂರ್ತಿಯಾದ ನಮ್ಮ ಬಸವಯ್ಯನು.
ಅರಿವ ಸಂಪಾದಿಸಿ ಆಚಾರವನಂಗಂಗೊಳಿಸಿ
ಏಳುನೂರೆಪ್ಪತ್ತು ಅಮರಗಣಂಗಳ
ಅನುಭವ ಮೂರ್ತಿಗಳನ್ನಾಗಿ ಮಾಡಿದಾತ ನಮ್ಮ ಬಸವಯ್ಯನು"
-ನೀಲಮ್ಮ (ಸ.ವ.ಸಂ.5, ವ:844)

ನೀಲಮ್ಮನವರ ಈ ವಚನ ಗಮನಿಸಿದಾಗ, ಬಸವಣ್ಣನವರೇ ಜ್ಞಾನದಾಸೋಹ ಸಂಸ್ಥಾಪಕರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅನುಭವಮಂಟಪವನ್ನು ಕಟ್ಟಿ, ಅಮರಗಣಂಗಳನ್ನು ಕರೆಸಿ ಅನುಭಾವ ಗೋಷ್ಠಿ ನಡೆಸುತ್ತಿದ್ದ ಬಸವಣ್ಣನವರು ಜ್ಞಾನದಾಸೋಹಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಕಲ್ಯಾಣವನ್ನು ಕೈಲಾಸಮಾಡಿದ ಬಸವಣ್ಣನವರು ಏಳುನೊರೆಪ್ಪತ್ತು ಅಮರಗಣಂಗಳನ್ನು ಅನುಭವ ಮೂರ್ತಿಗಳನ್ನಾಗಿ ಮಾಡಿದರು. ಈ ಅಮರಗಣಂಗಳು ಜ್ಞಾನದಾಸೋಹ ಮಾಡುತ್ತ, ಜನರಲ್ಲಿ ಅರಿವಿನ ಬೆಳಕು ಹಚ್ಚಿದರು. ಅನುಭವಮಂಟಪ ಕಲ್ಯಾಣದ ಜ್ಞಾನದಾಸೋಹ ಕೇಂದ್ರವಾಗಿದ್ದರೆ, ಏಳುನೂರೆಪ್ಪತ್ತು ಅಮರಗಣಂಗಳು ಈ ಜ್ಞಾನ ಪ್ರಸಾರದ ನಿಜವಾದ ಜಂಗಮರಾಗಿದ್ದರು. ಜ್ಞಾನದಾಸೋಹದಲ್ಲಿ 12ನೇ ಶತಮಾನದಲ್ಲಿಯೇ ಇಂತಹದೊಂದು ದೊಡ್ಡ ಕ್ರಾಂತಿ ನಡೆದದ್ದು ಬಹುಮುಖ್ಯ ಸಂಗತಿಯಾಗುತ್ತದೆ.

ಅನೇಕ ವೀರಶೈವ ಪುರಾಣಗಳಲ್ಲಿ `ಮಹಾಮಂಟಪ ಸ್ಥಳ',`ಗಣಸಮೂಹ ಮಂಟಪ', `ಮಹಾಮನೆ' `ಕೂಡಲಸಂಗಮೇಶ ಭವನಮಂಟಪ', `ಒಡ್ಡೋಲಗ' ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಅಬ್ಬಲೂರು ಶಾಸನದಲ್ಲಿ ಏಕಾಂತ ರಾಮಯ್ಯನ ಪ್ರಸ್ತಾಪವಿದ್ದು "ಒಂದು ದಿವಸಂ ಧರ್ಮಗೋಷ್ಠಿಯೊಳಿರ್ದು..." ಎಂಬ ಮಾತು ಬರುತ್ತದೆ. ಇಂತಹ ಧರ್ಮಗೋಷ್ಠಿಯೇ ಅನುಭವ ಮಂಟಪವಾಗಿತ್ತು. ಇಂತಹ ಧರ್ಮಗೋಷ್ಠಿಗಳಲ್ಲಿ ಶರಣರು ಭಾಗವಹಿಸಿ ಜ್ಞಾನದಾಸೋಹ ಮಾಡುತ್ತಿದ್ದರು. ಏಕಾಂತದ ರಾಮಯ್ಯನವರ ಮೇಲೆ ಬಸವಣ್ಣನವರ ದಟ್ಟ ಪ್ರಭಾವವಾಗಿದೆ. ಅನುಭವಮಂಟಪವು ಸಾಮಾನ್ಯರ ವಿಶ್ವವಿದ್ಯಾಲಯವಾಗಿತ್ತು. 12ನೆ ಶತಮಾನದಲ್ಲಿ ಅನುಭವಮಂಟಪದ ಪ್ರಭಾವದಿಂದ ಇಂತಹ ಧರ್ಮಗೋಷ್ಠಿಗಳು ನಡೆದಿರಬಹುದಾಗಿದೆ. ಬೊಮ್ಮಯ್ಯ, ಜೇಡರದಾಸಿಮಯ್ಯ ಇವರೆಲ್ಲ ಶಿವಗೋಷ್ಠಿಗಳನ್ನು ನಡೆಸುತ್ತಿದ್ದರೆಂದು ಹರಿಹರ ಕವಿ ಹೇಳಿದ್ದಾನೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡುನೋಡಯ್ಯ.....
ಕೂಡಲಸಂಗನ ಅನುಭಾವದಿಂದ
ಎನ್ನ ಭವದ ಕೇಡು ನೋಡಯ್ಯ"
– ಬಸವಣ್ಣ (ಸ.ವ.ಸಂ.1, ವ: 842)

ಬಸವಣ್ಣನವರ ಈ ವಚನ ಜ್ಞಾನದಾಸೋಹಕ್ಕೆ ಒಳ್ಳೆಯ ಉದಾಹರಣೆ. ಅಜ್ಞಾನ ಅಳಿಯಬೇಕಾದರೆ ಜ್ಞಾನದಿಂದ ಮಾತ್ರ ಸಾಧ್ಯವೆಂದು ಅನುಭವಮಂಟಪವನ್ನು ಕಟ್ಟಿದರು. ಅಲ್ಲಿ ಶರಣರ ಅನುಭಾವದಿಂದ ತಮ್ಮ ಭವನಾಶವಾಯಿತೆಂದು ಹೇಳುವಲ್ಲಿ ಅನ್ನದಾಸೋಹಕ್ಕಿಂತಲೂ ಜ್ಞಾನದಾಸೋಹ ದೊಡ್ಡದೆಂದು ತಿಳಿಸಲಾಗಿದೆ. ಅಜ್ಞಾನದ ಬದಲು-ಜ್ಞಾನ, ತಮಂಧದ ಬದಲು ಜ್ಯೋತಿ, ಅಸತ್ಯದ ಬದಲು-ಸತ್ಯ ಉಂಟಾಗಬೇಕಾದರೆ ಅನುಭವಮಂಟಪ ಅಗತ್ಯವೆಂದು ತಿಳಿದಿದ್ದ ಬಸವಣ್ಣನವರು ಶರಣರ ಸತ್ಸಂಗದ ಮೂಲಕ ಜ್ಞಾನದಾಸೋಹವನ್ನು ಪ್ರಾರಂಭಿಸಿದರು. "ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ" ಎನ್ನುವ ಜೇಡರ ದಾಸಿಮಯ್ಯನವರು "ನಿಮ್ಮ ಶರಣರ ಸೂಳ್ನುಡಿಯ ಅರಗಳಿಗೆಯಿತ್ತಡೆ ನಿಮ್ಮನೇ ಇತ್ತೆ ಕಾಣಾ ರಾಮನಾಥಾ" ಎಂದಿದ್ದಾರೆ. ಜ್ಞಾನದಾಸೋಹ ಶರಣರ ಬಹುಮಹತ್ವದ ಸಿದ್ಧಾಂತವಾಗಿತ್ತು.

"ಅನುಭಾವವಿಲ್ಲದವನ ಭಕ್ತಿ ತಲೆಕೆಳಗಪ್ಪುದಯ್ಯ"ಎಂದು ತಮ್ಮ ಇನ್ನೊಂದು ವಚನದಲ್ಲಿ ಹೇಳಿರುವ ಜೇಡರ ದಾಸಿಮಯ್ಯನವರು ಅನುಭಾವವೇ ಭಕ್ತಿಗಾಧಾರವೆಂದು ಸ್ಪಷ್ಟಪಡಿಸಿದ್ದಾರೆ. "ಭಕ್ತಿಗೆ ಅನುಭಾವವೇ ಬೀಜಕಾಣಿರೋ" ಎಂದ ಚೆನ್ನಬಸವಣ್ಣನವರು ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತೆನ್ನುತ್ತಾರೆ. ತಲೆ ಹೊಲಸಾದರೆ ಹೇಗೆ ಸ್ನಾನ ಮಾಡುತ್ತೇವೆಯೋ, ವಸ್ತ್ರ ಮಾಸಿದಡೆ ಹೇಗೆ ಸ್ವಚ್ಛಗೊಳಿಸುತ್ತೇವೆಯೋ ಹಾಗೆ ಮನಸ್ಸು ಮೈಲಿಗೆಯಾದರೆ, ಶರಣರ ಅನುಭಾವದಿಂದ ಅದು ಶುದ್ಧವಾಗುತ್ತದೆಂದು ಚೆನ್ನಬಸವಣ್ಣನವರು ಮತ್ತೊಂದು ವಚನದಲ್ಲಿ ವಿವರಿಸಿದ್ದಾರೆ. ಲಿಂಗ-ಜಂಗಮ-ಪ್ರಸಾದ ಇವೆಲ್ಲಾ ಅನುಭಾವದಿಂದಲೇ ಹುಟ್ಟಿವೆಯೆಂದು ಅಲ್ಲಮಪ್ರಭು ಹೇಳಿದರೆ, "ಅನುಭಾವಿಗಳ ಸಂಗದಿಂದ ತನು ಶುದ್ಧವಾಯಿತೆಂದು" ಅಕ್ಕ ಹೇಳಿದ್ದಾರೆ. "ಬಸವಣ್ಣ ನಿನ್ನ ಮಹಾನುಭಾವ ಕೇಳಿ ಕೇಳಿ ಎನ್ನ ಭವಂ ನಾಸ್ತಿಯಾಯಿತ್ತು. ನಿನ್ನ ಸನ್ನಿಧಿಯಿಂದಾನು ಬದುಕಿದೆ ಕಾಣಾ ಬಸವಣ್ಣ" ಎಂದು ಪ್ರಭು ಬಸವಣ್ಣನವರನ್ನು ಕೊಂಡಾಡಿದ್ದಾರೆ.

## ಉಪಸಂಹಾರ

ಅನ್ನವು ಹಸಿದ ಹೊಟ್ಟೆಯನ್ನು ತುಂಬಿಸಿದರೆ, ಜ್ಞಾನವು, ಅರಿವಿನ ಹಸಿವನ್ನು ಹಿಂಗಿಸುತ್ತದೆ. ಅಂತೆಯೇ ಶರಣರು ಅನ್ನದಾಸೋಹ ಮತ್ತು ಜ್ಞಾನದಾಸೋಹಕ್ಕೆ ಮಹತ್ವದ ಸ್ಥಾನ ನೀಡಿದ್ದಾರೆ. ಆನೆ, ಕುದುರೆ, ಸಾಮ್ರಾಜ್ಯ, ಸಂಪತ್ತು ಇವೆಲ್ಲಕ್ಕಿಂತ ತಿಳುವಳಿಕೆ ಮಾತು, ಶರಣರ ಸೂಳ್ನುಡಿ ಬಹಳ ಮುಖ್ಯವೆಂದು ಅವರು ನಂಬಿದ್ದರು. ಆ ಕಾರಣಕ್ಕೆ ಜ್ಞಾನಕ್ಕೆ-ಅನುಭಾವಕ್ಕೆ ಸೂಳ್ನುಡಿಗಳಿಗೆ ಅವರು ಪ್ರಾಮುಖ್ಯತೆ ನೀಡಿದ್ದಾರೆ. ಶರಣರ ದಾಸೋಹತತ್ವಕ್ಕೆ ಅನೇಕ ಆಯಾಮಗಳಿವೆ. ಕಾಯಕತತ್ವ ದಾಸೋಹತತ್ವದಿಂದ ಸಾಮಾಜಿಕ ಸಮಾನತೆಯನ್ನು ತರಲು ಮಾಡಿದ ಅವರ ಪ್ರಯತ್ನಗಳು ಗಮನಾರ್ಹವಾಗಿವೆ.

## ಪರಾಮರ್ಶನ ಗ್ರಂಥಗಳು


- ಕನ್ನಡ ಶಾಸನ ಸಂಪದ, ಸಂ. ಡಾ.ಆರ್.ಸಿ.ಹಿರೇಮಠ, ಡಾ.ಎಂ.ಎಂ.ಕಲಬುರಗಿ, ೧೯೭೪.
- ಬಸವ ದರ್ಶನ, ಪ್ರೊ. ದೇಜಗೌ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೪.
- ವಚನಕಾರರ ಕಾವ್ಯ ಮೀಮಾಂಸೆ, ಎಸ್.ಎಂ.ಹಿರೇಮಠ, ಅಶ್ವಿನಿ ಪ್ರಕಾಶನ, ಕಲಬುರ್ಗಿ, ೧೯೯೯.
- ಶರಣ ಸಾಹಿತ್ಯ - ಸಂಸ್ಕೃತಿ ಕೆಲವು ಅಧ್ಯಯನಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು – ೨೦೦೦.
- ಸಮಗ್ರ ವಚನ ಸಂಪುಟ, ಎಂ.ಎಂ. ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.